ಹೋಗಿತ್ತು. 'ಅವನೂ ಗಂಡಸೇ ಅಲ್ಲವಾ? ಹೆಂಗಸು ಬೇಕಲ್ಲ. ಇನ್ನೊಂದು ಲಗ್ನವಾದರೂ ಮಾಡಿಕಂಡಿದ್ದರೆ ಚೆನ್ನಾಗಿತ್ತು. ಇಟ್ಟುಕೊಂಡವನಂತೆ. ಅವನಿಗೇನು ಬಂದಿತ್ತು ದೊಡ್ಡರೋಗ. ತಮ್ಮ ವಂಶದಲ್ಲಿ ಯಾರೂ ಇವನಂಗೆ ಇರಲಿಲ್ಲ. ಇವನ ಅವತಾರ ನೋಡಲು ಸದ್ಯ ಅಪ್ಪನಿಲ್ಲವಲ್ಲ. ಅವನ ಅಣ್ಣಂದಿರು ಅವನ ಮೂಸಿ ನೋಡದೆ ತಮ್ಮ ಪಾಡಿಗೆ ತಾವಿರುವುದು ಸರಿಯಾದ್ದೇ. ಇಂಥ ದರಿದ್ರದೋನ ಜತೆ ಅಪ್ಪಂಥೋರು ಸಂಬಂಧ ಉಳಿಸಿಕೊಳ್ಳಾಕೆ ಆದಾತಾ?' ಮೃತ್ಯುವಿನ ಬಗ್ಗೆ ಕೋಪಗೊಂಡಿದ್ದಳು. ಮನಸು ಮಗಳತ್ತ ತಿರುಗಿತ್ತು. 'ಪಾಪಿ ನನ್ಮಗ. ಅನ್ಯಾಯಕಾರ, ನನ್ನ ಮಗಳ ಬದುಕಾ ಹಾಳ್ ಮಾಡಿಬುಟ್ಟ. ನಾನೂ ಪಾಪಿಯೇ ಆ ಅನ್ಯಾಯಕಾರನಿಗಾಗಿ ನನ್ನ ಮಗಳ ಬುಟ್ಟುಕೊಟ್ಟೆ' ಪಾರೋತವ್ವನ ಮನ ವಿಲವಿಲ ಒದ್ದಾಡಿಕೊಂಡಿತ್ತು. ಲಗ್ಣವಾದ ವರ್ಷದೊಳಗೇ ಗಂಡನನ್ನು ಕಳಕೊಂಡಿದ್ದಳು. ತನಗೆ ಗಂಡಸು ಬೇಕೆನ್ನಿಸಲಿಲ್ಲ. ಲಗ್ಣವಾದ ಮೂರು ತಿಂಗಳಿಗೇ ಮೃತ್ಯೂ ಮಗಳನ್ನು ಬಿಟ್ಟು ಹೋಗಿಬಿಟ್ಟಿದ್ದ. ಅವಳಿಗೂ ಗಂಡಸು ಬೇಕೆನ್ನಿಸಲಿಲ್ಲ. ಇವನಿಗೆ ಮಾತ್ರ ಹೆಂಗಸು ಬೇಕಿತ್ತಲ್ಲವಾ? ಮನ ಎತ್ತೆತ್ತಲೋ ಓಡುತ್ತಿತ್ತು. ತನ್ನ ಮಗಳು ಮತ್ತು ಅವನ ನಡುವೆ ಅದೆಂಥ ಸಂಗತಿ ನಡೆದಿರಬಹುದು. ಮೃತ್ಯೂ ಕಣ್ಮರೆಯಾಗಿಬಿಟ್ಟಿದ್ದಾನೆ. ಸೀನ ಹೇಳುವುದು ಎಷ್ಟು ದಿಟವೋ ಸಟೆಯೋ ಮನಸ್ಸಿಗೆ ಗೊಂದಲವಿದೆ. ಮಗಳ ಬಳಿಯಲ್ಲಿ ಏನಾದರೂ ಕೇಳಲು ಸಾಧ್ಯವಾ? ತಾನವಳ ವಿಷ್ಯದಲ್ಲಿ ಅಪರಾಧಿಯಾಗಿ ಬಿಟ್ಟು ಹೋಗಿ ಕೇಳುವ ಧೈರ್ಯವೆಲ್ಲಿದೆ?

★★★

ಈಗ ನೋಡಬೇಕು ಮಗಳು ದೊರೆಸಾನಿಯಂತೆ ಬದುಕು ಸಾಗಿಸುತ್ತಿದ್ದಾಳೆ. ಮಗಳನ್ನ ಕಂಡರೀಗ ಪಾರೋತವ್ವನಿಗೆ ಎಲ್ಲಿಲ್ಲದ ಕಕ್ಕುಲಾತಿ. ಹಿಂದೆ ಕೊಡದ ಆದರ ಪ್ರೀತಿಗಳನ್ನೆಲ್ಲ ಬಡ್ಡಿ ಸಹಿತ ಕೊಡುವಂತೆ ಮಗಳೆಡೆಗೆ ಅವಳ ಮನಸು ಹರಿಯುತ್ತಿದೆ. ಗಾರೆಸೀನಣ್ಣನ ಮಾತು ಕೇಳಿ ಊರವರು ಮೃತ್ಯೂನ ಮಾತಾಡಲು ಅವಳ ಜಗುಲಿಗೆ ಬರುವುದಿದೆ. ಪಾರೋತವ್ವನಿಗೆ ಅದರ ಬಗೆಗೆ ಆಸಕ್ತಿಯಿಲ್ಲ. "ಬುಟ್ಟು ಹೋದೋನ ಬಗೆಗೆ ಎಂಥ ಮಾತು ತಗಳಪ್ಪಾ. ಆಡಾಕೆ ಬೇಕಾದಂಗದೆ ಬೇರೆ ಮಾತುಗೋಳು" ನಿಸೂರಾಗಿ ತುಂಡರಿಸಿಬಿಡುತ್ತಾಳೆ.

ಈ ನಡುವೆ ಗಾರೆಸೀನಣ್ಣ ಮೃತ್ಯೂವಿಗೆ ದೊಡ್ಡದೊಂದು ಮಾರಣಾಂತಿಕವಾದ ಅಪಘಾತವಾಗಿದ್ದ ಸುದ್ದಿಯನ್ನು ತಂದು ಪಾರೋತವ್ವನ ಮುಂದೆ ಸುರಿದಿದ್ದ. ಪಾರೋತವ್ವ ಮೌನವಾಗಿಬಿಟ್ಟಿದ್ದಳು. ಈ ಎಲ್ಲ ವಿಷಯಗಳೂ ಗೌರಿಗೆ ಗೊತ್ತಿರುವಂಥದ್ದೇ! ಅವಳೆಂದೂ ಅವ್ವ ಮತ್ತು ಮೃತ್ಯೂವಿನ ನಡುವಿನ ಪ್ರೀತಿಗೆ ಮಧ್ಯೆ ಬಂದವಳಲ್ಲ. ನಿಜವೋ ಸುಳ್ಳೋ ಸೀನಣ್ಣನ ಮೂಲಕ ಮೃತ್ಯುವಿನದೊಂದು ಲೋಕ ಅವ್ವನೆದುರು ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ತೆರೆದುಕೊಳ್ಳುತ್ತಿದೆ. ಅವ್ವ ಮಾತುಗಳಲ್ಲಿಯಾದರೂ ಅವನನ್ನು ಅನುಭವಕ್ಕೆ ತಂದುಕೊಳ್ಳುವ ಸುಖಕ್ಕೆ ತಾನು ಯಾಕಾದರೂ ಅಡ್ಡಿಯಾಗಬೇಕು? ಗೌರಿ ಮೃತ್ಯೂವಿನ ಯಾವ ವಿಷಯವೂ ತನಗೆ ಗೊತ್ತಿಲ್ಲವೆಂಬಂತೆಯೇ ಸುಮ್ಮನಿದ್ದು ಬಿಟ್ಟಿದ್ದಳು. ಗೌರಿ "ಹೋದಯವ್ವಾ ನಿನ್ ತಮ್ಮುನ್ ನೋಡಾಕೆ... ಯವಸ್ಥೆ ಮಾಡ್ಲಾ..." ಸಣ್ಣಗಿನ ಧ್ವನಿಯಲ್ಲಿ ನಿರ್ವಿಕಾರ ಭಾವದೊಡನೆ ಕೇಳಿದ್ದಳು. ಪಾರೋತವ್ವ ಮಾಲು ಸಮೇತ ಸಿಕ್ಕ ಕಳ್ಳನಂಗೆ ಗಾಬರಿಗೊಂಡಿದ್ದಳು. ಮಗಳಿಗಾಗಲೆ ಎಲ್ಲ ವಿಷಯವೂ ತಿಳಿದಿದೆ. "ಯಾಕಾ ಗೌರ ಇಂಥ ಮಾತ ಕೇಳ್ತಯಿ ನನ್ನ? ಅಂಥಾ ಅನ್ನಾಡೀನಾ ನಾನು ಯಾವತ್ತು ಅವ್ನು ಹೇಳ್ದೆ ಕೇಳ್ದೆ ಸಂಬಂಧ ಹರ್ಕಂಡು ಹೋದ್ನೋ ಆವೊತ್ತೆ ನಮ್ ಸಂಬಂದಕ್ಕೆ ಎಳ್ಳು ನೀರ ಬುಟ್‌ಬುಟ್ಟಿನ್ನಿ ಕವ್ವ. ಸೀನ ಯಾರದ್ದೋ ಒಂದು ಯಿಷ್ಯ ಹೇಳ್ತಾ ಅವ್ನೆ ಅಂತ ಮಾತ್ರ ಕೇಳಿಸ್ಕಂಡಿ ಅಷ್ಟೆ. ದಿಟವಾಗೂ ನನ್ ಮಾತ್ನಾಗಿರಾದು ಅಷ್ಟೆಯಾ. ಎದೆಯಾಗೆ ಇರಾದೂ ಅಷ್ಟೇಯಾ ಶಿವುನ ಪ್ರಮಾಣವಾಗೂ" ಗೌರಿ ಮುಂದೆ ಮಾತನಾಡ ಹೋಗಿರಲಿಲ್ಲ.